# ಗುಜರಾತಿನ ಸಾನಂದ್: ಭಾರತದ ಸೆಮಿಕಂಡಕ್ಟರ್ ಹಬ್



## ಇತ್ತೀಚೆಗೆ ಸುದ್ದಿಯಲ್ಲಿದೆ:

- ಇತ್ತೀಚೆಗೆ, ಭಾರತದ ಪ್ರಧಾನಮಂತ್ರಿಯವರು ಗುಜರಾತಿನ ಸಾನಂದ್‌ನಲ್ಲಿ **'ಕೇನ್ಸ್ ಸೆಮಿಕಾನ್'** ಸಂಸ್ಥೆಯ ಅರೆವಾಹಕ (ಸೆಮಿಕಂಡಕ್ಟರ್)ಗಳನ್ನು ಜೋಡಿಸುವ ಮತ್ತು ಪರೀಕ್ಷಾ ಘಟಕವನ್ನು ಉದ್ಘಾಟಿಸಿದರು.
- ಈ ಯೋಜನೆಯು **"ಇಂಡಿಯಾ ಸೆಮಿಕಂಡಕ್ಟರ್ ಮಿಷನ್"** (ISM)ನ ಒಂದು ಪ್ರಮುಖ ಭಾಗವಾಗಿದೆ.
- ಇದು ಭಾರತವನ್ನು **ಜಾಗತಿಕ ಅರೆವಾಹಕ (ಸೆಮಿಕಂಡಕ್ಟರ್) ಉತ್ಪಾದನಾ ಕೇಂದ್ರವನ್ನಾಗಿ** ಮಾಡುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿದೆ.
- ಜಾಗತಿಕ ಅರೆವಾಹಕ ಪೂರೈಕೆ ಸರಪಳಿಯಲ್ಲಿ ಸಾನಂದ್ ಅನ್ನು ಒಂದು ನಿರ್ಣಾಯಕ ಕೊಂಡಿಯಾಗಿ ರೂಪಿಸಲಾಗುತ್ತಿದೆ.

## ಇಂಡಿಯಾ ಸೆಮಿಕಂಡಕ್ಟರ್ ಮಿಷನ್ (ISM):

**ಪ್ರಾರಂಭ:–**
**ಡಿಸೆಂಬರ್ 2021**

**ಅನುಷ್ಠಾನ ಸಚಿವಾಲಯ:–**
**ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ (MeitY).**

**ಉದ್ದೇಶ:– ದೇಶದಲ್ಲಿ ಸುಸ್ಥಿರವಾದ ಅರೆವಾಹಕ ಮತ್ತು ಪರದೆ (display)ಗಳ ಸಮಗ್ರ ಪೂರಕ ವ್ಯವಸ್ಥೆಯನ್ನು ನಿರ್ಮಿಸುವುದು.**

## ಇಂಡಿಯಾ ಸೆಮಿಕಂಡಕ್ಟರ್ ಮಿಷನ್ 2.0 (ISM 2.0):

**ಇದನ್ನು 2026–27ರ ಕೇಂದ್ರ ಬಜೆಟ್‌ನಲ್ಲಿ ಘೋಷಿಸಲಾಯಿತು.**

**ಭಾರತದಲ್ಲಿ ಸಂಪೂರ್ಣ ಪ್ರಮಾಣದ ಅರೆವಾಹಕಗಳ ಸಮಗ್ರ ಪೂರಕ ವ್ಯವಸ್ಥೆಯನ್ನು ಸೃಷ್ಟಿಸಲು ಇದು ಅರೆವಾಹಕ ಉಪಕರಣಗಳು ಮತ್ತು ಕಚ್ಚಾ ವಸ್ತುಗಳ ಮೇಲೆ ಕೇಂದ್ರೀಕರಿಸುತ್ತದೆ.**

## ಸರ್ಕಾರದ ಇತರ ಯೋಜನೆಗಳು:

**ಚಿಪ್ ವಿನ್ಯಾಸ ಆಧಾರಿತ ಪ್ರೋತ್ಸಾಹ ಯೋಜನೆ (DLI Scheme):** ಚಿಪ್ ವಿನ್ಯಾಸ ಮಾಡುವ ಸ್ಟಾರ್ಟ್‌ಅಪ್‌ಗಳಿಗೆ ಹಣಕಾಸು ಮತ್ತು ಮೂಲಸೌಕರ್ಯ ಬೆಂಬಲ ಒದಗಿಸುತ್ತದೆ.

**ಎಲೆಕ್ಟ್ರಾನಿಕ್ ಉತ್ಪಾದನೆಗಾಗಿ – ಉತ್ಪಾದನೆ ಆಧಾರಿತ ಪ್ರೋತ್ಸಾಹ PLI ಯೋಜನೆ:** ಇದು ಮೊಬೈಲ್ ಉತ್ಪಾದನೆಯ ಬೆಳವಣಿಗೆಯ ಜೊತೆಗೆ ಬೇಡಿಕೆಯ ಆಧಾರಿತ ಪರಿಸರ ವ್ಯವಸ್ಥೆಯನ್ನು ಉತ್ತೇಜಿಸುತ್ತದೆ.

**ಚಿಪ್–ಟು–ಸ್ಟಾರ್ಟ್‌ಅಪ್ ಕಾರ್ಯಕ್ರಮ:** 300ಕ್ಕೂ ಹೆಚ್ಚು ಸಂಸ್ಥೆಗಳಿಗೆ **EDA ಉಪಕರಣಗಳು** ಮತ್ತು ಉತ್ಪಾದನಾ ನಿರ್ಮಾಣ ಬೆಂಬಲವನ್ನು ಇದು ಒದಗಿಸುತ್ತದೆ.

**ರಾಷ್ಟ್ರೀಯ ನಿರ್ಣಾಯಕ ಖನಿಜಗಳ ಮಿಷನ್ ಮತ್ತು ವಿರಳ ಭೂ ಧಾತುಗಳ ಕಾರಿಡಾರ್ (Rare Earth Corridor):** ಚೀನಾ ಹಾಗೂ ಸೆಮಿಕಂಡಕ್ಟರ್ 'ಫ್ಯಾಬ್' **(Fabs)** ಘಟಕಗಳಿಗಾಗಿ ತೈವಾನ್ ಮೇಲಿನ ಅವಲಂಬನೆಯನ್ನು ತಗ್ಗಿಸುವುದು.

## ಜಾಗತಿಕ ಪೂರೈಕೆ ಸರಪಳಿ ಮತ್ತು ಕಾರ್ಯತಂತ್ರದ ಸ್ಥಾನಮಾನ:



**ಅಮೆರಿಕ ನೇತೃತ್ವದ 'ಪ್ಯಾಕ್ಸ್ ಸಿಲಿಕಾ' ಉಪಕ್ರಮ:–**
ಈ ಉಪಕ್ರಮದಲ್ಲಿ **ಭಾರತದ ಸದಸ್ಯತ್ವವು** ಅರೆವಾಹಕ ಮತ್ತು ಕೃತಕ ಬುದ್ಧಿಮತ್ತೆಯಂತಹ (AI) ನಿರ್ಣಾಯಕ ತಂತ್ರಜ್ಞಾನಗಳ ಪೂರೈಕೆ ಸರಪಳಿಯನ್ನು ಭದ್ರಪಡಿಸುವ ಗುರಿಯನ್ನು ಹೊಂದಿದೆ.

## ಪ್ಯಾಕ್ಸ್ ಸಿಲಿಕಾ ಉಪಕ್ರಮದ ಬಗ್ಗೆ:

**ಉದ್ದೇಶ:** ನಿರ್ಣಾಯಕ ಖನಿಜಗಳಿಂದ ಸುಭದ್ರ, ಸಮೃದ್ಧ ಮತ್ತು ನಾವೀನ್ಯತೆ ಆಧಾರಿತ **ಸಿಲಿಕಾನ್ ಪೂರೈಕೆ ಸರಪಳಿಯನ್ನು ನಿರ್ಮಿಸುವ ಅಮೆರಿಕ ನೇತೃತ್ವದ ಕಾರ್ಯತಂತ್ರದ ಉಪಕ್ರಮ** ಇದಾಗಿದೆ.

**ಸದಸ್ಯ ರಾಷ್ಟ್ರಗಳು:** ಜಪಾನ್, ದಕ್ಷಿಣ ಕೊರಿಯಾ, ಸಿಂಗಾಪುರ, ನೆದರ್ಲ್ಯಾಂಡ್ಸ್, ಯುನೈಟೆಡ್ ಕಿಂಗ್‌ಡಮ್, ಇಸ್ರೇಲ್, ಯುನೈಟೆಡ್ ಅರಬ್ ಎಮಿರೇಟ್ಸ್ ಮತ್ತು ಆಸ್ಟ್ರೇಲಿಯಾ.

